ಶ್ರೀ ಎಚ್. ಸಿದ್ದವೀರಪ್ಪ.—ಈ ರೀತಿ ಅವರು ಇರುವುದು ಕಾನೂನಿಗೆ ವಿರೋಧ. ಒಂದು ವೇಳೆ ಈ ರೀತಿ ಇದ್ದರೆ ಅವರನ್ನು ತೆಗೆದುಕೊಂಡು ಹೋಗಿ ಸೆಗ್ರಿಗೇಷನ್ ಕ್ಯಾಂಪ್‌ನಲ್ಲಿ ಇಡಬೇಕು. ನಿಮ್ಮ ಕಣ್ಣಿಗೆ ಯಾರಾದರೂ ಬಿದ್ದರೆ ಹೇಳಿ ಅವರನ್ನು ಸೆಗ್ರಿಗೇಷನ್ ಕ್ಯಾಂಪ್‌ನಲ್ಲಡುತ್ತೇವೆ.

ಶ್ರೀ ಆರ್. ಚಿಕ್ಕಯ್ಯ.—ಕುಷ್ಠರೋಗ ಇರುವ ಕಡೆ ನರ್ಸ್ ಮಾಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನ್ ನಾವು ಮಾಡುತ್ತಾ ಇದ್ದೇವೆ, ಕೇಂದ್ರ ಸರ್ಕಾರದವರು ಅದಕ್ಕೆ ಒಂದು ಸ್ಪೆಷರ್ ಸ್ಕ್ಯಾಡ್ ಇಟ್ಟಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಯ್ಯ.—ತಮ್ಮ ಉತ್ತರದಲ್ಲಿ ಇದು ಸಾಂಕ್ರಾಮಿಕ ರೋಗ ಇಡೀ ಸಂಸ್ಥಾನದಲ್ಲಿ ಇದೆ ಎಂದು ಒಪ್ಪಿಕೊಂಡಿದ್ದೀರಿ, ಬೆಂಗಳೂರಿನಲ್ಲಿ ಒಂದು ಸೆಂಟ್ರಲ್ ಲೆಪ್ರಸಿ ಇನ್ಸ್‌ಟ್ಯೂಟ್ ಅನ್ನು ತೆಗೆಯುತ್ತಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಬೆಂಗಳೂರಿನಲ್ಲಿ ಆ ಇನ್‌ಸ್ಟಿಟ್ಯೂಟನ್ನು ತೆಗೆಯಬೇಕಾದುದು ಅನಾವಶ್ಯಕ, ಎಲ್ಲೆಲ್ಲಿ ಹೆಚ್ಚಾಗಿದೆಯೋ ಅಂಥ ಕಡೆ ತೆಗೆಯುವುದು ಅವಶ್ಯಕ. ಬೀದರ್‌ನಲ್ಲಿ ಒಂದು ದೊಡ್ಡ ಕೇಂದ್ರ ಮಾಡಿದ್ದೇವೆ. ಕೊಳ್ಳೆಗಾಲದಲ್ಲಿ ಇದೆ, ಎಲ್ಲ ಹೆಚ್ಚಾಗಿ ಈ ಖಾಯಿಲೆ ಇದೆ ಅಲ್ಲಿ ಕೇಂದ್ರ ತೆಗೆಯುವುದು ಒಳ್ಳೆಯದು, ಬೆಂಗಳೂರಿನಲ್ಲಿ ಈ ಖಾಯಿಲೆ ಇಲ್ಲದವರಿಗೆ ಏತಕ್ಕೆ ತಂದು ಹಡ್ಡೋಣ.

ಬಿ. ವಿ. ಕಕ್ಕಿಲ್ಲಾಯ.—ಬೆಂಗಳೂರಿನ ಅಣ್ಣಮ್ಮ ಗುಡಿಯ ಹತ್ತಿರ, ಸಾದತ್ತಿಯ ಎಲ್ಲಮ್ಮ ಗುಡಿಯ ಹತ್ತಿರ ಮತ್ತು ಅವುಗಳ ಮುಂದುಗಡೆ ಈ ರೋಗದ ಜನರು ಭಿಕ್ಷೆ ಕೇಳುತ್ತಿರುತ್ತಾರೆ, ಆದ್ದರಿಂದ ಇದನ್ನು ಏನಾದರೂ ತಾವು ಹತೋಟಿಗೆ ತರುವ ವಿಚಾರ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರಮಾಡಿ ಕಾನೂನಲ್ಲಿ ಇದನ್ನು ತಡೆಗಟ್ಟುವುದಕ್ಕೆ ಅವಕಾಶ ಇಲ್ಲದಿದ್ದರೆ ಅವಕಾಶ ಮಾಡಿಕೊಳ್ಳೋಣ.

Encroachment of Land Belonging to the School of Sokkegrama

96. Sri HANJI SHIVANNA (Tarikere).—

Will the Minister for Education be pleased to state :—

(*a*) whether it is a fact that the land belonging to school of Sokkegrama in Tarikere taluk has been encroached and fences built ;

(*b*) whether it is a fact that even though the Philanthropists of the town have come forward to donate for construction of two school rooms, the work has come to standstill due to such fencing ;

(*c*) whether it is a fact that the villagers have been requesting the Government since many years to evict the encroachers and thus make available the land for school building ;

(*d*) whether it is not possible for Government to evict the encroachers from the land, if possible, the period in which the same will be made available ?

Sri A. R. BADARINARAYANA (Minister for Education).—

(*a*) Yes.

(*b*) Yes, the villagers have stated like that.

(*c*) Yes, the villagers have so requested.

(*d*) Orders have already been issued to the local Tahasildar concerned to take steps to evict the encroachers from the land according to law.

ಶ್ರೀ ಹಂಜಿ ಶಿವಣ್ಣ.—ನನ್ನ ಪ್ರಶ್ನೆಯ ಕೆಲವು ಭಾಗವನ್ನು ಒಪ್ಪಿಕೊಂಡಿದ್ದೀರಿ, ಈಗ ಸ್ಕೂಲಿಗೆ ಸೇರಿದ ನ್ಯಳವನ್ನು ಕೆಲವು ಪುಡಾರಿಗಳು ಒತ್ತುವರಿಮಾಡಿಕೊಂಡು ಸ್ಕೂಲು ಕಟ್ಟಿಸಲಿಕ್ಕೆ ಬಿಂದಂಥ ಜನಗಳಿಗೆ ತೊಂದರೆ ಮಾಡುತ್ತಿದ್ದಾರೆ. ಉತ್ತರದಲ್ಲಿ ಇದರ ಬಗ್ಗೆ ತಹಸೀಲ್ದಾರರಿಗೆ ತಿಳಿಸಿದ್ದೇವೆ ಎಂದು ಹೇಳಿದ್ದೀರಿ, ಆ ರೀತಿ ತಿಳಿಸಿ ಎಷ್ಟು ದಿವಸವಾಯಿತು ? ಆ ಸ್ಕೂಲನ್ನು ಕಟ್ಟಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎ. ಆರ್. ಬದರೀನಾರಾಯಣ.—ಎವಿಕ್ಷನ್ ಮಾಡಿಸಿ ಕಟ್ಟಡ ಕಟ್ಟುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಡೆಪ್ಯೂಟಿ ಕಮಿಷನರ್ ಅವರಿಗೆ ಬರೆದಿದ್ದೇವೆ.

ಶ್ರೀ ಹಂಜಿ ಶಿವಣ್ಣ.—ಬಹಳ ವರ್ಷಗಳಿಂದ ಇದುವರೆಗೂ ವತ್ತುವರಿಮಾಡಿಕೊಂಡು ಹೋಗಿದ್ದುದನ್ನು ತಮ್ಮಗಮನಕ್ಕೆ ತಂದಿದ್ದೇವೆ, ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಡೆಪ್ಯೂಟಿ ಕಮಿಷನರ್ ಅವರಿಗೆ ಆದೇಶ ಕೊಡುತ್ತೀರಾ ?

ಶ್ರೀ ಎ ಆರ್. ಬದರೀನಾರಾಯಣ.—ಅದನ್ನು ಆದಷ್ಟು ಬೇಗ ಮಾಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ —ತಾವು ಡಿ ನಲ್ಲಿ ಸಂಬಂಧಪಟ್ಟ ತಹಸೀಲ್ದಾರ್ ಅವರಿಗೆ ಆಜ್ಞೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ತಾವು ಎಂದು ಅವರಿಗೆ ತಿಳಿಸಿದಿರಿ ?

ಶ್ರೀ ಎ. ಆರ್. ಬದರೀನಾರಾಯಣ.—ತಹಸೀಲ್ದಾರ್ ಅವರು ಡೆಪ್ಯೂಟಿ ಕಮಿಷನರ್ ಅವರಿಗೆ ಬರೆದು, ಎವಿಕ್ಷನ್ ಆಕ್ಟ್ ಇರಲಿಲ್ಲವೆಂದು ಹೇಳಿದ್ದಾರೆ. ಆ ಪತ್ರಕ್ಕೆ ಉತ್ತರ ಸ್ವಲ್ಪ ವಿಳಂಬವಾಯಿತು. ಅದ್ದರಿಂದ ಆ ಆಕ್ಟ್ ಎಲ್ಲಾ ನಮ್ಮಲ್ಲಿ ಮಾಡಿಸಿ ಎವಿಕ್ಷನ್ ಮಾಡುವುದಕ್ಕೆ ಪ್ರಯತ್ನ ಮಾಡಿದೆ.

P. U. C. Text Books

469. Sri D. B KALMANKAR (Afzalpur).—

Will the Minister for Education be pleased to state.—

whether the P. U. C. Text Books in different languages for which different Committees were appointed last year are ready and available in market ?

Sri A. R. BADARINARAYANA (Minister for Education).—

Yes. Out of 8 Committees appointed last year, books prepared by 4 Committees *viz.*, English, Kannada, Sanskrit and Hindi Committees are ready and available in the market.

Sri D. B. KALMANKAR.—It is stated that out of 8 committees, four committees have prepared books. May I know which are the other four committees that have not prepared the books ?

† Sri A. R. BADARINARAYANA.—They are Telugu, Tamil, Marathi and Urdu Committees.

Sri D .B. KALMANKAR.—If that is so, what is the fate of students who are studying in those media and whether the Government will see that those committees prepare books intime so that the students may not suffer ?